OS No.659/2006
DW-2

**ಸಾಕ್ಷಿಯನ್ನು ದಿನಾಂಕ:17.08.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- ವಾದಿ ಪರ ವಕೀಲರಿಂದಃ**

ನಿ.ಪಿ-2 ರಲ್ಲಿ ಯಾರು ಸಾಕ್ಷಿಗಳೆಂದು ನನಗೆ ನೆನಪಿಲ್ಲ. ನಿ.ಪಿ-2 ಅನ್ನು ಸಾಕ್ಷಿಗೆ ತೋರಿಸಿ ಅದರಲ್ಲಿರುವ ಸಾಕ್ಷಿಗಳನ್ನು ತೋರಿಸಿ ಆತ ಈಗ ನನಗೆ ನೆನಪಾಗುತ್ತಿಲ್ಲ ಎನ್ನುವರು. ನಿ.ಪಿ-2 ರಲ್ಲಿ ಸಾಕ್ಷಿಯ ಹೆಸರು ಅಶ್ವಥನಾರಾಯಣ.ಸಿ, ನಂ.639 ದ ಸುಲಿಬೆಲೆ ಮೈನ್ ರೋಡ್, ದೇವನಹಳ್ಳಿ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಆತನು ದೇವನಹಳ್ಳಿಯಲ್ಲಿ SLN ಎಂದು ಪ್ರಖ್ಯಾತ ಹೊಂದಿರುತ್ತಾನೆ ಎಂದರೆ ಗೊತ್ತಿಲ್ಲ. ಆತ ರಾಜಕೀಯ ಪ್ರಭಾವ ವ್ಯಕ್ತಿ ಮತ್ತು ರಿಯಲ್ ಎಸ್ಟೇಟ್ ಮಾಡುತ್ತಾನೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ ದಾವಾ ಸ್ವತ್ತಿನ ಮೇಲೆ ಸಾಲ ಪಡೆದುಕೊಳ್ಳಲು ಸದರಿ SLN ಬಳಿ ಹೋಗಿರುತ್ತಾರೆ ಅವರು ನನ್ನ ಬಳಿ ಬಂದಿರುವುದಿಲ್ಲ ಎಂದರೆ ಸರಿ. ನಾನು ಮತ್ತು SLN ರವರು ಸೇರಿಕೊಂಡು 1 ನೇ ಪ್ರತಿವಾದಿಗೆ ಮೋಸ ಮಾಡುವ ದುರುದ್ದೇಶದಿಂದ ಅಕ್ರಮವಾಗಿ ಅವರಿಂದ ಆದಾರ ಪತ್ರ ಎಂದು ಹೇಳಿ ಕ್ರಯಪತ್ರವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನಿ.ಪಿ-2 ರಲ್ಲಿ ವೆಂಕಟಪ್ಪ, ವೆಂಕಟರೆಡ್ಡಿ ಮತ್ತು ಕುಮಾರಿ ಭವ್ಯಶ್ರೀ ಮತ್ತು ಮಾಸ್ಟರ್ ಮನೋಜ್ ಕುಮಾರ್ ರವರು ಪಕ್ಷಗಾರರಾಗಿರುತ್ತಾರೆ. ನಾನು ವೆಂಕಟರೆಡ್ಡಿಯವರನ್ನು ನಿ.ಪಿ-2 ರ ಪೂರ್ವದಲ್ಲಿ ನಾನು ಬೇಟಿ ಮಾಡಿದ್ದೇನೋ ಎಂದು ನೆನಪಿಲ್ಲ. ನಿ.ಪಿ-2 ರ 2 ನೇ ಪುಟ ಹಿಂಭಾಗದಲ್ಲಿ ವೆಂಕಟರೆಡ್ಡಿಯವರ ಭಾವ ಚಿತ್ರ ಇರುತ್ತದೆ. ಸಾಕ್ಷಿಗೆ ಇನ್ನೊಂದು ಭಾವ ಚಿತ್ರವನ್ನು ತೋರಿಸಿ ಅದರಲ್ಲಿರುವ ವ್ಯಕ್ತಿ ಸಹ ವೆಂಕಟರೆಡ್ಡಿಯಾಗಿರುತ್ತಾರೆ ಎಂದರೆ ಇಲ್ಲ ಎನ್ನುವರು. ಸದರಿ ದಾಖಲೆ ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿಯಾಗಿರುತ್ತದೆ. ಸದರಿ ವ್ಯಕ್ತಿ ಹೆಸರು ಮುನಿನಾರಾಯಣ ಗೌಡ ಆಗಿರುತ್ತೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಯನ್ನು ಉಪನೊಂದಣಿಕಾರಿಯವರ ಕಛೇರಿಯಲ್ಲಿ ನೋಡಿದ್ದಿರ ಎಂದರೆ ಸಾಕ್ಷಿ 20 ವರ್ಷಗಳಾದ ಕಾರಣ ಮರೆತಿರುತ್ತೇನೆ. ಸಾಕ್ಷಿ ಇನ್ನೊಂದು ಭಾವ ಚಿತ್ರವನ್ನು ಅದರಲ್ಲಿರುವ ವ್ಯಕ್ತಿ ನಿಮಗೆ ಗೊತ್ತಾ ಎಂದರೆ ಸಾಕ್ಷಿಯು 20 ವರ್ಷಗಳಾದ ಕಾರಣ ಮರೆತಿರುತ್ತೇನೆ. ಸಾಕ್ಷಿಗೆ ಸದರಿ ವೆಂಕಟರೆಡ್ಡಿಯವರ ಆಧಾರ್ ಕರ್ಡ್ ಅನ್ನು ತೋರಿಸಿ ಆತ ನಿಜವಾದ 2 ನೇ ಪ್ರತಿವಾದಿ ಆಗಿರುತ್ತಾನೆ ಎಂದರೆ ಸಾಕ್ಷಿಯು 20 ವರ್ಷಗಳಾದ ಕಾರಣ ಮರೆತಿರುತ್ತೇನೆ.

ನನಗೆ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. 2 ನೇ ಪ್ರತಿವಾದಿ ಎಂದಿಗೂ ನನ್ನ ಬಳಿ ವ್ಯವಹಾರ ಮಾಡಿರುವುದಿಲ್ಲ ಮತ್ತು ಆತ ಯಾವುದೇ ಕ್ರಯಪತ್ರ

ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ನಿ.ಪಿ-2 ರಲ್ಲಿ ವೆಂಕಟರೆಡ್ಡಿ ಎಂಬ ಭಾವ ಚಿತ್ರ ಇರುವ ವ್ಯಕ್ತಿ ಮುನಿನಾರಾಯಣಗೌಡ ಬಿನ್ ಚಿಕ್ಕಮುನಿಗೌಡ, ಬೆಟ್ಟಹಳ್ಳಿ ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ಎಂದರೆ ಸರಿಯಲ್ಲ. ನಿಮಗೆ ಯಾವಾಗ ದಾಖಲೆಯನ್ನು ಸೃಷ್ಟಿ ಮಾಡಿರುವ ಬಗ್ಗೆ ತಿಳಿದುಬಂದಿರುತ್ತದೆ ಎಂದರೆ ಸಾಕ್ಷಿಯು ಆ ರೀತಿ ಆಗಿರುವುದಿಲ್ಲ ಎನ್ನುವರು. ನನ್ನ, 1 ನೇ ಪ್ರತಿವಾದಿ ನಿ.ಪಿ-2 ರ ಸಾಕ್ಷಿಗಳು ಮತ್ತು ಕ್ರಯಪತ್ರ ಬರೆದುಕೊಟ್ಟ ಎಲ್ಲಾ ವ್ಯಕ್ತಿಗಳ ವಿರುದ್ದ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ಪೋಲಿಸರ ಮೇಲೆ ಪ್ರಭಾವ ಬೀರಿ ನಾನು ಸದರಿ ಪ್ರಕರಣದಲ್ಲಿ ಸಾಕ್ಷಿಯಾಗಿ ತೋರಿಸಲ್ಪಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕ್ರಿಮಿನಲ್ ಪ್ರಕರಣ ಬಾಕಿ ಇರುತ್ತದೆ ಮತ್ತು ಮೂಲ ಕ್ರಯಪತ್ರವನ್ನು ಸದರಿ ಪ್ರಕರಣದಲ್ಲಿ ಹಾಜರುಪಡಿಸಿದ್ದು ನಾನು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ ನಾನು ಮತ್ತು SLN ರವರು ಆಧಾರ್ ಪತ್ರ ಎಂದು ತಿಳಿಸಿ ಅಕ್ರಮ ಕ್ರಯಪತ್ರ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ದಾವಾ ಸ್ವತ್ತನ್ನು ಮಾರಾಟ ಮಾಡಲು ಯಾವುದೇ ಅದಿಕಾರ ಇರಲಿಲ್ಲ ಎಂದರೆ ಸಾಕ್ಷಿಯು ಆತ ಕರ್ತಾ ಆಗಿದ್ದನು ಎನ್ನುವರು. ಆತ ಒಟ್ಟು ಕುಟುಂಬದಿಂದ ಬೇರ್ಪಟ್ಟು ಮಂಡ್ಯದಲ್ಲಿ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದ ಎಂದರೆ ಗೊತ್ತಿಲ್ಲ. ಸದರಿ ಕ್ರಯಪತ್ರ ಕುಟುಂಬದ ಪೋಷಣೆಗಾಗಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಕ್ರಯಪತ್ರಕ್ಕೆ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ದುರುದ್ದೇಶದಿಂದ ನಾನು ಮತ್ತು SLN ರವರು ಸೇರಿಕೊಂಡು ನಿ.ಪಿ-2 ಅನ್ನು ಸೃಷ್ಟಿ ಮಾಡಿಕೋಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**